ಹೇಳುವುದುಂಟು. ಇದರ ಬಗ್ಗೆ ಒಬ್ಬೊಬ್ಬರು ಒಂದೊಂದು ರೀತಿ ವ್ಯಾಖ್ಯಾನ ಮಾಡುತ್ತಾರೆ, ಅರ್ಥೈಸುತ್ತಾರೆ. ಉದಾಹರಣೆಗೆ, ಒಬ್ಬ ಅನಾಹತಧ್ವನಿ ಕೇಳುತ್ತಾನೆ, ಇನ್ನೊಬ್ಬ ದೇವದೇವಿಯರ ಮೂರ್ತಿ ದರ್ಶನ ಮಾಡುತ್ತಾನೆ, ಮಗದೊಬ್ಬ ಜ್ಯೋತಿದರ್ಶನ ಮಾಡುತ್ತಾನೆ ...ಎಂದೆಲ್ಲ ಹೇಳುತ್ತಾರೆ.

**ಮಹಾರಾಜ್:** ಅನಾಹತಧ್ವನಿಯನ್ನು ಯಾರೂ ಭಗವತ್ ಸಾಕ್ಷಾತ್ಕಾರವೆಂದು ಹೇಳುವುದಿಲ್ಲ.

**ಪ್ರಶ್ನೆ:** ಭಗವಾನ್‌ಲಾಭ ಅಥವಾ ಭಗವತ್ಸಾಕ್ಷಾತ್ಕಾರವನ್ನು 'ಇದೇ ಭಗವಾನ್‌ಲಾಭ'ವೆಂದು ಹೇಗೆ ತಿಳಿದುಕೊಳ್ಳಲಿ?

**ಮಹಾರಾಜ್:** ಭಗವಾನ್‌ಲಾಭ ಒಬ್ಬನಿಗೆ ಆಗಿದೆ ಎಂದು ತಿಳಿಯಬೇಕಾದರೆ, ಅದಕ್ಕೆ ಕೆಲವು ಲಕ್ಷಣಗಳಿವೆ. ಭಗವಂತನು ಹೇಗೆ ಶುದ್ಧ, ಪವಿತ್ರ ಮತ್ತು ಸದ್ಗುಣ ಸಮನ್ವಿತನೋ ಹಾಗೆಯೇ ಯಾರು ಆತನನ್ನು ಒಲಿಸಿಕೊಂಡಿದ್ದಾನೋ, ಆತನೂ ಕೂಡ ಪವಿತ್ರ, ಶುದ್ಧ, ಮತ್ತು ಸರ್ವಗುಣ ಸಮನ್ವಿತನಾಗುತ್ತಾನೆ. ಭಗವತ್‌ಸಾಕ್ಷಾತ್ಕಾರವೆಂದರೆ ಇದೇ. ಆತನಲ್ಲಿ ಅಹಂಕಾರವಿರುವುದಿಲ್ಲ, ಅಭಿಮಾನವಿರುವುದಿಲ್ಲ; ಅವನು ನಿರ್ಭಯನಾಗಿರುತ್ತಾನೆ, ಸರ್ವಗುಣ ಸಮನ್ವಿತನಾಗಿರುತ್ತಾನೆ. ಈ ಗುಣಗಳೆಲ್ಲ ಆತನೊಳಗಿನಿಂದ ಸ್ಫುರಿಸುತ್ತಿರುತ್ತವೆ.

**ಪ್ರಶ್ನೆ:** ನಾವೆಲ್ಲ ನಮ್ಮ ಶಕ್ತ್ಯಾನುಸಾರ ಈ ದಾರಿಯಲ್ಲಿ ಮುಂದುವರಿಯಲು ಪ್ರಯತ್ನ ಮಾಡುತ್ತೇವೆ.. ಆದರೆ ನಿಜವಾಗಿಯೂ ಈ ದಾರಿಯಲ್ಲಿ ಸರಿಯಾಗಿ ಮುಂದುವರಿಯುತ್ತಿದ್ದೇವೆ ಎನ್ನುವುದಕ್ಕೆ ಅಳತೆಗೋಲು ಏನು?

**ಮಹಾರಾಜ್:** ವಿಶ್ವಾಸವೇ ಅತಿಮುಖ್ಯ. ಗುರು ಮತ್ತು ಶಾಸ್ತ್ರ, ವೇದಾಂತವಾಕ್ಯಗಳಲ್ಲಿ ವಿಶ್ವಾಸ – ಇದು ಮೊದಲ ಹಂತ. ಎರಡನೆಯದು ಆಂತರ್ಯದಿಂದ ಪ್ರಯತ್ನ. ಇವುಗಳಿದ್ದರೆ ಮುಂದುವರಿಯುವ ಸಂಭವ ಇರುತ್ತದೆ. ಸರಿ, ಇವು ನಿನ್ನೊಳಗೆ ಇದೆ ಎಂದು ಹೇಗೆ ತಿಳಿಯಬೇಕು? ಇದಕ್ಕೆ ಭಾಗವತದಲ್ಲಿ ಒಂದು ಶ್ಲೋಕವಿದೆ. ಯಾರು ಭಗವಂತನಲ್ಲಿ ಶರಣಾಗತನಾಗಿದ್ದಾನೋ ಆತನಲ್ಲಿ, ಈ ಮೂರು ಗುಣ ಒಟ್ಟಿಗೆ ಬರುತ್ತವೆ : **ಭಕ್ತಿರ್ವಿರಕ್ತಿರ್ಭಗವತ್ ಪ್ರಬೋಧಃ ।** ಭಗವಂತನಲ್ಲಿ ಅನುರಾಗ ವೃದ್ಧಿಸುತ್ತದೆ, ಭಗವಂತ ಬಿಟ್ಟು ಇನ್ನಿತರ ವಸ್ತುಗಳಲ್ಲಿ ವೈರಾಗ್ಯ ಬರುತ್ತದೆ. ಇನ್ನು ಭಗವತ್ ಸ್ವರೂಪದ ಬಗ್ಗೆ ಸಂದೇಶ ದೂರವಾಗುತ್ತದೆ. ವ್ಯಕ್ತಿ ಮುಂದುವರಿದ ಹಾಗೆ ಈ ಮೂರು ಗುಣಗಳೂ ಸಮಭಾವದಲ್ಲಿ ಆತನೊಳಗಿಂದ ಪ್ರಕಾಶಕ್ಕೆ ಬರುತ್ತದೆ. ಭಾಗವತ ಶ್ಲೋಕವೊಂದು ಹೀಗಿದೆ:

**ಭಕ್ತಿಃ ಪರೇಶಾನುಭವೋ ವಿರಕ್ತಿರನ್ಯತ್ರ ಚೈಷ ತ್ರಿಕ ಏಕಕಾಲಃ ।**
**ಪ್ರಪದ್ಯಮಾನಸ್ಯ ಯಥಾಶ್ನತಃ ಸ್ಯುಸ್ತುಷ್ಟಿಃ ಪುಷ್ಟಿಃ ಕ್ಷುದಪಾಯೋಽನುಘಾಸಮ್॥** *(ಭಾಗವತ 11-2-42)*

ದೃಷ್ಟಾಂತ ಹೀಗೆ ಹೇಳಿದೆ : ತೀರ ಹಸಿದವನೊಬ್ಬನಿಗೆ ಎಷ್ಟೊಂದು ಹಸಿವೆಯಾಗಿದೆ ಎಂದರೆ, ಆತನಿಗೆ ನಿಲ್ಲಲು ಕೂಡ ತ್ರಾಣವಿಲ್ಲದಾಗಿದೆ, ಮನಸ್ಸಿನಲ್ಲಿ ಭಾರೀ ಅಶಾಂತಿ ಎದ್ದಿದೆ. ಅಂತಹವನಿಗೆ ಊಟ ಕೊಡಲಾಗುತ್ತದೆ. ಒಂದೊಂದು ಮುಷ್ಟಿ ಅನ್ನ ಜಠರ ಸೇರಿದ ಹಾಗೆ, ಆತನ ದುರ್ಬಲತೆ ಕಡಿಮೆಯಾಗುತ್ತ ಹೋಗುತ್ತದೆ. ಮಾನಸಿಕ ಅಸಂತೋಷ ಕಡಿಮೆಯಾಗುತ್ತದೆ. ಹೀಗೆ ಯಾರು ಭಗವಂತನಲ್ಲಿ ಶರಣಾಗತರಾಗುತ್ತಾರೋ ಅವರಿಗೆ ಈ ಮೂರು ಗುಣಗಳು ಒಟ್ಟೊಟ್ಟಿಗೆ ಬರುತ್ತವೆ – **ಭಕ್ತಿ, ವಿರಕ್ತಿ, ಭಗವತ್ ಪ್ರಬೋಧ.**

**ಪ್ರಶ್ನೆ:** ಮಹಾರಾಜರೆ, ಒಂದು ಭಜನೆ ಇದೆ– **'ರಾಜರಾಜೇಶ್ವರ ದೇಖಾ ದಾವು । ಕರುಣಾಭಿಖಾರಿ ಆಮಿ ಕರುಣಾನಯನೇ ಚಾವು'** ಅಂತ. ಇದರ ಅರ್ಥವೇನು?

**ಮಹಾರಾಜ್:** ಅವನು ರಾಜರಾಜೇಶ್ವರನಾಗಿರದಿದ್ದರೆ ಆತನ ಹತ್ತಿರ ಬೇಡುವುದೇನು ಬಂತು? ಅವನು ಒಂದು ವೇಳೆ ಕರುಣಾಮಯ ನಲ್ಲದಿದ್ದರೆ ನನಗೆಲ್ಲಿಂದ ಕರುಣೆತೋರಿಸಬಲ್ಲ? ಹೀಗಾಗಿ ಈ ರೀತಿ ಪ್ರಾರ್ಥನೆ ಮಾಡುತ್ತೇವೆ.

**ಪ್ರಶ್ನೆ:** ಯಾರು ಭಗವಂತನಲ್ಲಿ ವಿಶ್ವಾಸವಿಡುವುದಿಲ್ಲವೋ, ಯಾರು ಈಶ್ವರನನ್ನು ಒಪ್ಪುವುದಿಲ್ಲವೋ ಅವರಿಗೆ ಇದನ್ನೆಲ್ಲ ಹೇಳಿ ಪ್ರಯೋಜನವಿಲ್ಲ.

**ಮಹಾರಾಜ್:** ಅಂತಹವರು ಈಶ್ವರನನ್ನು ಒಪ್ಪುವುದೂ ಇಲ್ಲ, ಅಥವಾ ಈ ರೀತಿ ಹೇಳುವುದೂ ಇಲ್ಲ, ಅವರಿಗೇಕೆ ದಯಾಮಯ, ಕರುಣಾಮಯ ಇತ್ಯಾದಿ?

**ಪ್ರಶ್ನೆ:** ಯಾರು ದೇವರರನ್ನು ನಂಬುವುದಿಲ್ಲವೋ ಅಂತಹವರು, ''ನೀನೇಕೆ ದೇವರನ್ನು ದಯಾಮಯನೆಂದು ಹೇಳುವೆ'' ಎಂದು ಪ್ರಶ್ನಿಸಿದರೆ?

**ಮಹಾರಾಜ್:** ನಾವು ಆತನ ದಯೆಯ ಮೇಲೆ ನಿರ್ಭರರಾಗಿದ್ದೇವೆ, ಎಂದು ಹೇಳುವುದು. ಆತನನ್ನು ದಯಾಮಯನೆಂದು ಹೇಳುತ್ತೇವೆ, ಆದರೆ ಆತನನ್ನು ಅರಿತು ಹಾಗೆ ಹೇಳುತ್ತಿಲ್ಲ. ಅವನ ಪ್ರಾರ್ಥನೆ ಮಾಡುತ್ತೇನೆ, ಅದು ಅವನ ವಿಶ್ವಾಸ ಗಳಿಸಲಿಕ್ಕಾಗಿ. ವಿಶ್ವಾಸವಿದ್ದರೆ ಇನ್ನು ದಯಾಮಯ ಎಂದು ಕರೆಯಬೇಕು?

**ಪ್ರಶ್ನೆ:** ನಮ್ಮ ಮನಸ್ಸಿನ ಭಾವ, ನಮ್ಮ ಮನಸ್ಸಿನ ಗುಣಗಳನ್ನೇ ಈಶ್ವರನ ಗುಣವೆಂದು ಆರೋಪಿಸುತ್ತೇವೆ. ಅಂದರೆ ಈಶ್ವರನಿಗೆ ದಯಾಮಯ ಅಥವಾ ಇನ್ನಿತರ ಗುಣಗಳನ್ನು ಆರೋಪಿಸುತ್ತೇವೆ. ಇದರಲ್ಲಿ ವಾಸ್ತವಾಂಶವಿರುವುದಿಲ್ಲ.

**ಮಹಾರಾಜ್:** ಯಾರು ಈಶ್ವರನನ್ನು ಅರಿತಿದ್ದರೋ ಅವರೇ ಹೇಳಬಲ್ಲರು. ಭಗವಂತನನ್ನು ಅರಿಯದವನು, ಅವನು ಎಂಥವನೆಂದು ಹೇಗೆ ಹೇಳಬಲ್ಲ? ಅವನನ್ನು ದಯಾಮಯ ಎಂದು ಹೇಳುವವರು, ಅವರಿಗೆ ದಯೆ ಬೇಕೆಂದು ಪ್ರಾರ್ಥನೆ ಮಾಡುತ್ತಾರೆ. ಸಿಖ್ಖರು ಶ್ರೀರಾಮಕೃಷ್ಣರಿಗೆ ಹೇಳಿದರು, ಭಗವಂತ ದಯಾಮಯ ಎಂದು. ಪರಮಹಂಸರು ಕೇಳುತ್ತಾರೆ, 'ಅವನೇಕೆ ದಯಾಮಯ?'ಅದಕ್ಕೆ ಸಿಖ್ಖರು, 'ಆತ ನಮಗೆ ಅದು ಕೊಡುತ್ತಾನೆ, ಇದು ಕೊಡುತ್ತಾನೆ' ಎಂದರು. ಅದಕ್ಕೆ ಪರಮಹಂಸರು ಹೇಳಿದರು,''ತಂದೆ ತನ್ನ ಮಕ್ಕಳನ್ನು ಸಾಕುವುದು, ಅದೇನು ಮಹಾ ದೊಡ್ಡ ಕೆಲಸವೆ?'' *

# ಒಂದು ಅಸಾಧಾರಣ ಸಾಹಸಗಾಥೆ

''ಇಚ್ಛಾಶಕ್ತಿ ಎಲ್ಲಕ್ಕಿಂತ ಪ್ರಬಲವಾದುದು. ಅದರ ಎದುರಿಗೆ ಎಲ್ಲವೂ ಮಣಿಯಬೇಕು. ಅದು ಸ್ವಯಂ ಭಗವಂತನಿಂದ ಬರುವುದು'' ಎಂಬ ಸ್ವಾಮಿ ವಿವೇಕಾನಂದರ ಮಾತಿಗೆ ಜೀವಂತ ನಿದರ್ಶನ ಇಲ್ಲಿದೆ - ಪ್ರಪಂಚದ ಅತ್ಯುನ್ನತ ಪರ್ವತ ಶಿಖರವಾದ ಎವರೆಸ್ಟ್ ಶಿಖರವನ್ನು ಏರಿದ ಮೊದಲ ಅಂಗವಿಕಲ ಮಹಿಳೆ ಕುಮಾರಿ ಅರುಣಿಮಾ ಸಿನ್ಹಾ ಅವರ ಅಸಾಧಾರಣ ಯಶೋಗಾಥೆ. ಇತ್ತೀಚೆಗೆ ಅವರು ಬೆಂಗಳೂರು, ಮೈಸೂರು ನಗರಗಳಿಗೆ ಭೇಟಿಯಿತ್ತು ಹಲವು ಸಂಘಸಂಸ್ಥೆಗಳಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡರು. ಅವರ ಮಾತುಗಳು ಅನೇಕ ಮಂದಿ ಯುವಕ ಯುವತಿಯರ ಅಂತರಂಗದಲ್ಲಿ ಅಸಾಧಾರಣ ಸ್ಫೂರ್ತಿಯನ್ನು ತುಂಬಿದವು. ಅವರ ಮಾತುಗಳಿಂದಲೇ ಸಂಗ್ರಹಿಸಿದ ಅವರ ಸಾಹಸದ ಕಥೆಯನ್ನಿಲ್ಲಿ ಸಂಗ್ರಹಿಸಿ ನೀಡುತ್ತಿದ್ದೇವೆ.

ಉತ್ತರ ಪ್ರದೇಶದ ಲಕ್ನೋ ನಗರಕ್ಕೆ ಸೇರಿದ ಅರುಣಿಮಾ ಸಿನ್ಹಾ ರಾಷ್ಟ್ರಮಟ್ಟದ ಕ್ರೀಡಾಪಟುವಾಗಿದ್ದಳು; ಒಂದು ಪರೀಕ್ಷೆ ಬರೆಯುವ ಸಲುವಾಗಿ ೨೦೧೧ರ ಏಪ್ರಿಲ್ ೧೧ ರಂದು ಲಕ್ನೋದಿಂದ ದೆಹಲಿಗೆ ಪದ್ಮಾವತಿ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದಳು. ಮಧ್ಯರಾತ್ರಿಯಲ್ಲಿ ದರೋಡೆಕೋರರು ಪ್ರಯಾಣಿಕರ ಮೇಲೆ ಬಿದ್ದು, ಬಂದೂಕು ತೋರಿಸಿ ಅವರಲ್ಲಿದ್ದ ಹಣ, ಆಭರಣಗಳನ್ನೆಲ್ಲ ಬಲವಂತವಾಗಿ ದೋಚತೊಡಗಿದರು. ಧೀರ ಪ್ರವೃತ್ತಿಯ ಹುಡುಗಿ ಅರುಣಿಮಾ ಅದಕ್ಕೆ ಬಾಗಲಿಲ್ಲ. ತನ್ನಲ್ಲಿದ್ದ ಚಿನ್ನದ ಸರ, ಪರ್ಸ್ ಇವನ್ನು ಅವರಿಗೊಪ್ಪಿಸದ್ದಕ್ಕಾಗಿ ದರೋಡೆಕೋರರು ಅವಳನ್ನು ವೇಗವಾಗಿ ಓಡುತ್ತಿದ್ದ ರೈಲಿನಿಂದ ಹೊರಕ್ಕೆಸೆದುಬಿಟ್ಟರು! ಎದುರಿನಿಂದ ಬರುತ್ತಿದ್ದ ರೈಲುಗಾಡಿ, ಇನ್ನೊಂದು ಹಳಿಗಳ ಮೇಲೆ ಬಿದ್ದ ಅರುಣಿಮಾಳ ಮೇಲಿಂದ ಹಾದುಹೋಯಿತು. ಅವಳ ಎಡಗಾಲು (ಮೊಣಕಾಲ ಕೆಳಗಿನಿಂದ) ಕತ್ತರಿಸಿಹೋಯಿತು. ನೋವಿನಿಂದ ಅವಳಿಗೆ ಮೈ ಅಲುಗಾಡಿಸಲೂ ಸಾಧ್ಯವಾಗುತ್ತಿರಲಿಲ್ಲ. ಸಹಾಯಕ್ಕಾಗಿ ಎಷ್ಟು ಕೂಗಾಡಿದರೂ, ಅವಳ ಕೂಗು ಯಾರಿಗೂ ಕೇಳಿಸಲಿಲ್ಲ. ಇಡೀ ರಾತ್ರಿ ಅವಳು ರೈಲು ಹಳಿಗಳ ನಡುವೆ ಅಸಹಾಯಕಳಾಗಿ ಬಿದ್ದಿರಬೇಕಾಯಿತು.

ಮರುದಿನ ಬೆಳಿಗ್ಗೆ ಕೆಲವು ಮಂದಿ ಹಳ್ಳಿಯ ಜನರು ಅವಳ ಅವಸ್ಥೆಯನ್ನು ನೋಡಿ, ಅವಳನ್ನು ಸಮೀಪದ ಬರೇಲಿಯಲ್ಲಿನ ಒಂದು



ಸರ್ಕಾರಿ ಆಸ್ಪತ್ರೆಗೆ ಸೇರಿಸಿದರು. ತುರ್ತಾಗಿ ಅವಳಿಗೆ ಆಪರೇಷನ್ ಮಾಡಬೇಕಿತ್ತು. ಅಲ್ಲಿ ಅನಸ್ತೇಶಿಯಾ ನೀಡಲು, ಸಾಕಷ್ಟು ಪ್ರಮಾಣದ ರಕ್ತ ನೀಡಲು ವ್ಯವಸ್ಥೆಯಿರಲಿಲ್ಲ. ಈ ಪರಿಸ್ಥಿತಿಯಲ್ಲಿ ಆಪರೇಷನ್ ಮಾಡಲಾಗದು ಎಂದು ವೈದ್ಯರು ಮಾತನಾಡಿಕೊಳ್ಳುತ್ತಿದ್ದರು. ಅಂಥ ವೇದನೆಯ ನಡುವೆಯೂ ಅದನ್ನು ಕೇಳಿಸಿಕೊಂಡ ಅರುಣಿಮಾ, ''ಇಲ್ಲ, ನಾನು ಬದುಕಬೇಕು. ನನಗೆ ಅನಸ್ತೇಶಿಯಾ ಇಲ್ಲದೇ ಆಪರೇಷನ್ ಮಾಡಿ. ಇಡೀ ರಾತ್ರಿ ನಾನು ಅಸಾಧ್ಯ ನೋವು ಅನುಭವಿಸಿದ್ದೇನೆ. ಅದರ ಮುಂದೆ ಇದು ಏನೂ ಅಲ್ಲ'' ಎಂದಳು. ಅವಳ ದೃಢವಾದ ಮಾತುಗಳನ್ನು ಕೇಳಿ ಬೆರಗಾದ ವೈದ್ಯರೊಬ್ಬರು ಸ್ವತಃ ತಮ್ಮ ರಕ್ತವನ್ನೇ ಅವಳಿಗೆ ನೀಡಿ ಆಪರೇಷನ್ ಮಾಡಲು ಮುಂದಾದರು. ಆಪರೇಷನ್ ಮಾಡುವಾಗ ಅವಳು ಇಡೀ ನೋವನ್ನು ಸಹಿಸಿಕೊಂಡಳು.

ಅಷ್ಟರಲ್ಲಿ ಅವಳಿಗೆ ಅಫಘಾತವಾದ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದಂತೆ ಅವಳ ಬಂಧುಮಿತ್ರರು, ಕ್ರೀಡಾಕ್ಷೇತ್ರದ ಹಿತೈಷಿಗಳು ಅವಳ ನೆರವಿಗೆ ಬಂದರು. ಮೊದಲು ಲಕ್ನೋದ ಒಂದು ಒಳ್ಳೆಯ ಆಸ್ಪತ್ರೆಯಲ್ಲಿ, ಅನಂತರ ದೆಹಲಿಯ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಆಸ್ಪತ್ರೆಯಲ್ಲೂ ಅವಳ ಚಿಕಿತ್ಸೆಗೆ ವ್ಯವಸ್ಥೆಯಾಯಿತು. ನಾಲ್ಕು ತಿಂಗಳ ಚಿಕಿತ್ಸೆಯ ನಂತರ ಅವಳಿಗೆ ಕೃತಕ ಕಾಲನ್ನು ಜೋಡಿಸಬೇಕಾಯಿತು. ಆದರೆ ಅವಳ ಕ್ರೀಡಾ ಜಗತ್ತು ಅಲ್ಲಿಗೇ ನಿಂತುಹೋಯಿತು.

ಅವಳು ಆಸ್ಪತ್ರೆಯಲ್ಲಿ ಮಲಗಿದ್ದಾಗ ಅವಳ ಬಂಧುಗಳು, ಸ್ನೇಹಿತರು ಅವಳ ಕ್ರೀಡಾಚಟುವಟಿಕೆ ಅಲ್ಲಿಗೇ ನಿಂತು ಹೋಯಿತೆಂದೇ ನಂಬಿದ್ದರು. ಅದಕ್ಕಾಗಿ ಅವರು ಅವಳ ಮುಂದೆ ವಿಷಾದ ವ್ಯಕ್ತಪಡಿಸಿದ್ದರು. ಅರುಣಿಮಾಗೆ ದೈಹಿಕ ಯಾತನೆಗಿಂತ ಹೆಚ್ಚಾಗಿ ಕ್ರೀಡೆಗಳಲ್ಲಿ ಭಾಗವಹಿಸಲಾಗದ ದುಃಖವೇ ಹೆಚ್ಚಿನದಾಗಿತ್ತು. ಇದ್ದಕ್ಕಿದ್ದಂತೆ ಅವಳಿಗೊಂದು ಛಲ ಬಂತು, ತಾನು ಏನನ್ನಾದರೂ ಸಾಧಿಸಬೇಕು. 'ಹೌದು, ನನ್ನಂಥ ವಿಕಲಾಂಗರಿಗೂ ಮಹತ್ತರವಾದ ಕಾರ್ಯ ಸಾಧಿಸಬಹುದು ಎಂಬುದನ್ನು ನಾನು ಜಗತ್ತಿಗೆ ತೋರಿಸಿಕೊಡಬೇಕು' ಎಂಬ ಆಲೋಚನೆ ಬಂತು. 'ಇಲ್ಲ, ನಾನೆಂದಿಗೂ ಸೋಲೊಪ್ಪಿಕೊಳ್ಳಲಾರೆ. ನನ್ನ ಸ್ನೇಹಿತರೆಲ್ಲ ಅಂದು ಕೊಂಡದ್ದನ್ನು ನಾನು ಸುಳ್ಳಾಗಿಸುತ್ತೇನೆ' ಎಂದು ಅವಳು ದೃಢವಾಗಿ ನಿರ್ಧರಿಸಿದಳು.

ಚಿಕಿತ್ಸೆ ಮುಗಿಯುತ್ತಿದ್ದಂತೆ ಅರುಣಿಮಾ ಪರ್ವತಾರೋಹಣದ ಬಗ್ಗೆ ಮಾಹಿತಿ ಸಂಗ್ರಹಿಸಿದಳು. ಪರ್ವತಾರೋಹಣ ಎಲ್ಲ ಕ್ರೀಡೆಗಳಲ್ಲಿ ಅತ್ಯಂತ ಕಠಿಣವೂ, ಅಪಾಯಕರವೂ ಅಷ್ಟೇ ಸಾಹಸದಿಂದ



ಎವರೆಸ್ಟ್ ವಿಜಯಿ

ಕೂಡಿದ್ದೂ ಆಗಿದೆ. ತಾನು ಅದನ್ನೇ ಸಾಧಿಸಬೇಕು, ಹೌದು, ಪ್ರಪಂಚದ ಅತ್ಯಂತ ಎತ್ತರದ ಶಿಖರವನ್ನೇ ಏರಿ ಅಸಾಧ್ಯವಾದುದನ್ನು ಸಾಧ್ಯವಾಗಿಸಬೇಕು! ಅರುಣಿಮಾ ನಿಶ್ಚಯಿಸಿಬಿಟ್ಟಳು.

ಎವರೆಸ್ಟ್ ಏರಿದ ಮೊತ್ತಮೊದಲ ಭಾರತೀಯ ಮಹಿಳೆ ಎಂಬ ಖ್ಯಾತಿ ಪಡೆದಿದ್ದ ಬಚೇಂದ್ರಿ ಪಾಲ್, ಪರ್ವತಾರೋಹಣ ಮಾಡುವವರಿಗೆ ತರಬೇತಿ ನೀಡುತ್ತಿದ್ದಳು. ಅವಳನ್ನು ಸಂಪರ್ಕಿಸುವ ಮುನ್ನ ಪ್ರತಿಯೊಬ್ಬರೂ ಅರುಣಿಮಾ ಮಾತನ್ನು ಕೇಳಿ ಹೌಹಾರಿ, ''ನೀನೆ? ನಿನಗೆ ಕಾಲಿಲ್ಲ, ಅದುಹೇಗೆ ಪರ್ವತ ಏರುತ್ತೀಯಂತೆ?'' ಎಂದು ಅವಳ ಆಸೆಗೆ ತಣ್ಣೀರೆರಚಿ ಛೇಡಿಸಿದ್ದರು. ಆದರೆ ಪಾಲ್ ಮಾತ್ರ ಅವಳ ಛಲವನ್ನು ಗುರುತಿಸಿ, ಅವಳಿಗೆ ಸಂಪೂರ್ಣ ಪ್ರೋತ್ಸಾಹ ನೀಡಿದ್ದಳು. ಅವಳ ಬಳಿ ಒಂದು ವರ್ಷ ಕಠಿಣ ತರಬೇತಿ ಪಡೆದ ಅರುಣಿಮಾ, ಎವರೆಸ್ಟ್ ಆರೋಹಣಕ್ಕೆ ಪೂರ್ವಭಾವಿಯಾಗಿ ಮಾಡುವ ಐಲೆಂಡ್ ಪೀಕ್ ಎಂಬ ಶಿಖರವನ್ನು ಯಶಸ್ವಿಯಾಗಿ ಏರಿದಳು.

೨೦೧೩ರ ಜನವರಿಯಲ್ಲಿ ಅರುಣಿಮಾ ರಾಮಕೃಷ್ಣ ಮಿಷನ್ನಿನ ಒಂದು ಕೇಂದ್ರಕ್ಕೆ ಹೋಗಿದ್ದಾಗ ಅಲ್ಲಿನ ಸ್ವಾಮೀಜಿಗಳು ಅವಳಿಗೆ ಸ್ವಾಮಿ ವಿವೇಕಾನಂದರ ಪುಸ್ತಕಗಳನ್ನು ಹಾಗೂ ಶ್ರೀರಾಮಕೃಷ್ಣ, ಶಾರದಾದೇವಿ, ಸ್ವಾಮಿ ವಿವೇಕಾನಂದರ ಚಿತ್ರಗಳಿರುವ ಒಂದು ಫೋಟೋವನ್ನು ಉಡುಗೊರೆಯಾಗಿ ಕೊಟ್ಟರು. ಆ ಪುಸ್ತಕವನ್ನು ಯಾವಾಗಲೂ ಓದಿ ಸ್ಫೂರ್ತಿ ಪಡೆಯುವಂತೆ, ತೊಂದರೆಯಾದಾಗಲೆಲ್ಲ ದಿವ್ಯತ್ರಯರನ್ನು (ಶ್ರೀರಾಮಕೃಷ್ಣ, ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರು) ಪ್ರಾರ್ಥಿಸುವಂತೆ ಅವರು ಉಪದೇಶಿಸಿದರು. ಅರುಣಿಮಾ ಅಂತೆಯೇ ಅವನ್ನೆಲ್ಲ ಪಾಲಿಸಿದಳು.

ಎವರೆಸ್ಟ್ ಆರೋಹಣಕ್ಕೆ ಸಿದ್ಧಳಾದ ಅರುಣಿಮಾ ೨೦೧೩ರ ಏಪ್ರಿಲ್ ೧ ರಂದು ನೇಪಾಳದ ಕಾಠಮಂಡು ತಲುಪಿದಳು. ೧೭ರಂದು ಮೂಲಶಿಬಿರವನ್ನು ತಲುಪಿದ ಆಕೆ ಒಂದು ತಿಂಗಳ ಕಾಲ ಅಲ್ಲಿನ ಪರಿಸರಕ್ಕೆ ಹೊಂದಿಕೊಂಡಳು. ತನ್ನ ಟೆಂಟ್‌ನಲ್ಲೇ ಒಂದು ಸಣ್ಣ ಗುಡಿಯನ್ನು ಮಾಡಿಕೊಂಡು, ಅದರಲ್ಲಿ ದಿವ್ಯತ್ರಯರ ಚಿತ್ರವನ್ನಿಟ್ಟು, ಅದನ್ನು ಪ್ರತಿದಿನ ಪೂಜಿಸುತ್ತಿದ್ದಳು. ಮೇ ೧೬ ರಂದು ಮೂಲಶಿಬಿರದಿಂದ ಎವರೆಸ್ಟ್ ಶಿಖರದತ್ತ ಆರೋಹಣ ಆರಂಭವಾಯಿತು. ಅರುಣಿಮಾ ಉಳಿದವರಿಗಿಂತ ಹೆಚ್ಚು ತೊಂದರೆ ಎದುರಿಸಬೇಕಾಯಿತು. ಅತ್ಯಂತ ಕಠಿಣವಾದ ಆರೋಹಣದ ನಡುವೆ ಒಂದು ಬಾರಿ ಕೃತಕ ಕಾಲು ಕಿತ್ತುಬಂತು. ಉಳಿದವರೆಲ್ಲ, 'ಮುಂದುವರಿ, ಮುಂದುವರಿ' ಎಂದು ಕೂಗಾಡುತ್ತಿದ್ದರು. ಅರುಣಿಮಾ ತನ್ನ ಕೃತಕ ಕಾಲನ್ನು ಒಂದು ಕೈಯಲ್ಲಿ ಹಿಡಿದುಕೊಂಡು ಮತ್ತೆ ಅದನ್ನು ಜೋಡಿಸಿಕೊಂಡಳು. ಪರ್ವತವನ್ನೇರುವಾಗಲೆಲ್ಲ ಅವಳು ''ಜೈ ಸ್ವಾಮೀಜಿ!'' ಎಂದು ಸ್ವಾಮಿ ವಿವೇಕಾನಂದರಿಗೆ ಜೈಕಾರ ಮಾಡುತ್ತಿದ್ದಳು. ಆಗಾಗ ತನ್ನ ಬ್ಯಾಗಿನಲ್ಲಿದ್ದ ದಿವ್ಯತ್ರಯರ ಚಿತ್ರವನ್ನು ತೆಗೆದು ನೋಡಿ, ಅನಂತರ ಅವಳು ಅದನ್ನು ಬ್ಯಾಗಿನ ಒಳಗಿಡುತ್ತಿದ್ದಳು. ಅದನ್ನು ನೋಡಿದ ಜೊತೆಗಾರ ಶೆರ್ಪಾ, ''ಅದೇಕೆ ಹೀಗೆ ಅನಗತ್ಯವಾದದ್ದನ್ನೆಲ್ಲ ಮಾಡುತ್ತೀರಿ?'' ಎಂದು ಕೇಳುತ್ತಿದ್ದ. ಆಗ ಅರುಣಿಮಾ, ''ನಿನಗೆ ಇದು ಅರ್ಥವಾಗುವುದಿಲ್ಲ. ಇದು ನನ್ನ ಎನರ್ಜಿ ಕ್ಯಾಪ್ಸೂಲ್(ಶಕ್ತಿದಾಯಕ ಮಾತ್ರೆ)''ಎನ್ನುತ್ತಿದ್ದಳು.

ನಡುನಡುವೆ ಅನೇಕ ಶವಗಳು ಮರಳುತ್ತಿದ್ದವು. ಅನೇಕ ಮಂದಿ ಪರ್ವತಾರೋಹಣದ ನಡುವೆಯೇ ವಿವಿಧ ತೊಂದರೆಗಳಿಂದ ಹೆಣವಾಗಿಬಿಡುತ್ತಿದ್ದರು. ಅವೆಲ್ಲ ತೀರ ಸಾಮಾನ್ಯವಾಗಿತ್ತು. ಅದನ್ನೆಲ್ಲ ನೋಡಿದರೂ ಅರುಣಿಮಾ ಎದೆಗುಂದಲಿಲ್ಲ. ಅವರಿಗಾಗಿ ಆಕೆ ಪ್ರಾರ್ಥಿಸಿದಳು: ''ನಿಮ್ಮಲ್ಲಿ ಎಷ್ಟು ಮಂದಿ ಶಿಖರವೇರಿ ಜಯಶಾಲಿಗಳಾಗಿದ್ದೀರೋ ನನಗೆ ತಿಳಿಯದು. ನಿಮ್ಮ ಸಲುವಾಗಿ ನಾನು ಈ ಆರೋಹಣ ಪೂರೈಸಿ ಮರಳುತ್ತೇನೆ. ದಯವಿಟ್ಟು ನನ್ನನ್ನು ಹರಸಿ.''

ಇನ್ನೇನು, ೭೦೦ ಅಡಿ ದೂರದಲ್ಲೇ ಎವರೆಸ್ಟ್ ಶಿಖರದ ತುದಿ ಇದೆ ಎನ್ನುವಾಗ ಅರುಣಿಮಾಳ ಆಮ್ಲಜನಕ ಖಾಲಿಯಾಗುವ ಸೂಚನೆ ಲಭಿಸಿತು. ಕೂಡಲೇ ಶೆರ್ಪಾ 'ವಾಪಸ್' ಎಂದ. (ಏನಾದರೂ ಸಣ್ಣ ತೊಂದರೆಯಾದಾಗಲೂ ಶೆರ್ಪಾ 'ವಾಪಸ್' ಎನ್ನುತ್ತಿದ್ದ. ಅನಗತ್ಯ ತೊಂದರೆಯಾಗಿ ಜೀವ ಕಳೆದುಕೊಳ್ಳುವ ಬದಲು, ಹಿಂದಿರುಗಿ ಬದುಕಿ ಉಳಿಯುವುದು ವಾಸಿ ಎಂದು ಹಾಗನ್ನುತ್ತಿದ್ದ. ಅತ್ಯಂತ ಅಪಾಯಕರ ಸನ್ನಿವೇಶದಲ್ಲಿ ಹಾಗೆ ಹಿಂದಿರುಗುವುದು ಅನಿವಾರ್ಯ. ಆದರೆ ಅರುಣಿಮಾಗೆ 'ವಾಪಸ್' ಎಂಬ ಶಬ್ದವನ್ನು ಕೇಳಿದಂತೆಲ್ಲ ಇಮ್ಮಡಿ ಚೈತನ್ಯ ತುಂಬಿಬಿಡುತ್ತಿತ್ತಂತೆ. ತಾನು ಇದನ್ನು ಸಾಧಿಸಲೇಬೇಕು ಎಂದು ಅವಳು ಮತ್ತಷ್ಟು ದೃಢ ನಿಶ್ಚಯದಿಂದ ಮುಂದುವರಿಯುತ್ತಿದ್ದಳಂತೆ.) ಅಷ್ಟು ಎತ್ತರದ ಶಿಖರದಲ್ಲಿ ಆಮ್ಲಜನಕವಿಲ್ಲದಿದ್ದರೆ ಸಾವು ನಿಶ್ಚಿತವೆ. ಅರುಣಿಮಾ ಅಲ್ಲಿಂದಲೇ ಎವರೆಸ್ಟ್ ಶಿಖರದ ತುದಿಯನ್ನು ನೋಡಬಹುದಾಗಿತ್ತು. ''ಶಿಖರದ ತುದಿ ತಲುಪಲು ಬೇಕಾದಷ್ಟು ಆಕ್ಸಿಜನ್ ನನ್ನ ಬಳಿ ಇದೆ. ನನ್ನ ದೇಶದ ಧ್ವಜ ಮತ್ತು ದಿವ್ಯತ್ರಯರ ಚಿತ್ರವನ್ನು ಅಲ್ಲಿ ನಾನು ಇಡಲೇಬೇಕು'' ಎಂದು ಆಲೋಚಿಸಿ, ಅವಳು ತನ್ನ ಜೀವನದ ಅತ್ಯಂತ ಅಪಾಯಕರವಾದ ನಿರ್ಧಾರವನ್ನು ತೆಗೆದುಕೊಂಡಳು. ಶೆರ್ಪಾ ಅವಳಿಗೆ ಎಚ್ಚರಿಕೆ ನೀಡಿದ; ಅವಳ ಸಾವನ್ನು ಕಣ್ಣಮುಂದೆ ನೋಡಬೇಕಾಗುವುದು, ಹಾಗಾಗಿ ತಾನು ಅವಳ ಜೊತೆಗೆ ಬರಲಾರೆ ಎಂದ. ಆದರೆ ಅವಳ ದೃಢನಿರ್ಧಾರವನ್ನು ಕಂಡು, ಕೊನೆಗೂ ಅವಳೊಂದಿಗೆ ಸೇರಿಕೊಂಡ.

ಮೇ ೨೧ರಂದು ಪೂರ್ವಾಹ್ನ ೧೦.೫೫ಕ್ಕೆ ಅರುಣಿಮಾ ಎವರೆಸ್ಟ್ ಶಿಖರದ ತುದಿಯನ್ನು ಏರಿದಳು. ಅವಳು ತನ್ನ ಜೀವನದ ಮಹತ್ತರ ಸಾಹಸವನ್ನು ಮೆರೆದಿದ್ದಳು. ಪ್ರಪಂಚದಲ್ಲಿ ಮೊದಲ ಬಾರಿಗೆ ಎವರೆಸ್ಟ್ ಏರಿದ ಅಂಗವಿಕಲ ಮಹಿಳೆ ಅವಳಾಗಿದ್ದಳು. ಅಲ್ಲಿ